## ಜವಾಹರ್ ಲಾಲ್ ನೆಹರು ತಾರಾಲಯ

ಬೆಂಗಳೂರು

# ಅನ್ಯಗ್ರಹಗಳ ಅನ್ವೇಷಣೆ

### ಸೌರವ್ಯೂಹದಲ್ಲಿ ಪಯಣ

**ಸಾರಾಂಶ:** ಅನ್ಯಗ್ರಹದ ಅನ್ವೇಷಣೆ ಒಂದು ಅದ್ಭುತ ಯಾನ. ಅಪ್ರತಿಮ ಸೌಂದರ್ಯದ ರೋಮಾಂಚಕಾರಿ ಅನುಭವ ನೀಡುವ ಈ ಮೂವತ್ತು ನಿಮಿಷಗಳು, ಅತ್ಯಂತ ಸ್ಪಷ್ಟವಾದ **4**ಕೆ ರೆಸಲ್ಯೂಶನ್ ಚಿತ್ರಗಳಿಂದ ರೂಪುಗೊಂಡಿವೆ.

ಸೂರ್ಯನ ಮತ್ತು ಸೌರಮಂಡಲದ ಇತರ ಕಾಯಗಳ ವರ್ಣವೈವಿಧ್ಯವನ್ನು, ಹೈ ರೆಸಲ್ಯೂಶನ್‌ನ ಚಿತ್ರಗಳು ಅತ್ಯಂತ ಆನಂದವನ್ನು, ಮರೆಯಲಾಗದ ಅನುಭವವನ್ನೂ ನೀಡುತ್ತವೆ.
ಅಮೋಘ ತೇಜೋ ರಾಶಿಯಿಂದ ಕೂಡಿದ ಸೂರ್ಯ ತನ್ನ ಒಡಲಾಳದ ಸುಂದರ ಸತ್ಯವನ್ನು ಬಿಚ್ಚಿಡುತ್ತಾ, ಮೇಲ್ಮೈಯಲ್ಲಿರುವ ಸೌರಕಲೆಗಳು ಮತ್ತು ಸೌರ ಜ್ವಾಲೆಗಳನ್ನು ಪ್ರದರ್ಶಿಸುತ್ತದೆ. ಚಂದ್ರನ ಅಂಗಳದಿಂದ ಭೂಮಿಯ ಆ ನೋಟ ನಮ್ಮನ್ನೂ ಕಲ್ಪನಾ ಲೋಕಕ್ಕೆ ಕರೆದೊಯ್ಯುತ್ತದೆ.

ಬುಧ ಗ್ರಹದ ಬಂಡೆಗಲ್ಲುಗಳು, ಪ್ರಖರ ಶುಕ್ರನ ದಟ್ಟವಾದ ಮೋಡಗಳು, ಮಂಗಳನ ಮೇಲಿನ ಸುರುಳಿ ಗಾಳಿಗಳು, ಕಂದಕಗಳು, ದೈತ್ಯ ಪರ್ವತ "ಒಲಂಪಸ್"ನ ಭವ್ಯ ನೋಟ ಬೆರಗುಗೊಳಿಸುತ್ತವೆ. ಉರುಳು ಬಂಡೆಗಳಂತೆ ಕಾಣುವ ಅಸ್ಟ್ರಾಯ್ಡ್‌ಗಳು, ಅನಿಲ ದೈತ್ಯ ಗುರುಗ್ರಹ ಮತ್ತು ಅದರ ಮೇಲ್ಮೈನ ವರ್ಣರಂಜಿತ ಪಟ್ಟಿಗಳು ಮನೋಹರವಾಗಿ ಚಿತ್ರಿತವಾಗಿವೆ. ಸೌರಮಂಡಲದ ಅತ್ಯಂತ ಆಕರ್ಷಣೆಯ ಕಾಯ "ಶನಿ", ತನ್ನ ಉಂಗುರಗಳ ರಚನೆಯನ್ನು, ಅದರ ಸೊಬಗನ್ನು ತೆರೆದಿಡುತ್ತಾ ಈ ಸೌರಯಾನಕ್ಕೆ ಸಾರ್ಥಕತೆಯನ್ನು ತಂದುಕೊಡುತ್ತದೆ.

ಇತರ ಅನಿಲ ದೈತ್ಯಗಳಾದ ಯುರೇನಸ್ ಮತ್ತು ನೆಪ್ಚೂನ್ ತಮ್ಮ ಉಪಗ್ರಹಗಳೊಡನೆ ಕಾಣಿಸಿ ತಮ್ಮ ರಹಸ್ಯಮಯ ದಿವ್ಯ ಲೋಕಕ್ಕೆ ಕರೆದೊಯ್ಯುತ್ತದೆ. ಅನಿಲಗಳಿಂದ ಕೂಡಿದ ಧೂಮಕೇತುಗಳು ಮತ್ತು ಇತರ ಕ್ಷುದ್ರಗ್ರಹಗಳು ಅತ್ಯಂತ ಮನೋಹರವಾಗಿ ಚಿತ್ರಿತವಾಗಿದೆ.
ನಮ್ಮ ಸೌರಮಂಡಲದ ಭೌತಿಕ ಸೌಂದರ್ಯವನ್ನು ತೆರೆದಿಡುವಲ್ಲಿ ಈ ಪ್ರದರ್ಶನ ಯಶಸ್ವಿಯೆನಿಸುವುದರಲ್ಲಿ ಯಾವುದೇ ಸಂಶಯವಿಲ್ಲ ಎಂಬ ವಿನಮ್ರ ನಂಬಿಕೆ.

## Jawaharlal Nehru Planetarium

Bengaluru

# To Worlds Beyond

### Journey through the Solar System

**Synopsis:** This 30 minute 4K resolution full dome, sky theatre show takes you on a voyage to other planets and our Solar System.

Cliffs on Mercury, dazzling Venus with its thick clouds, Swirling dust storms, valleys, the gigantic mount Olympus on Mars are breath taking. The beauty of tumbling asteroids, giant Jupiter and its colourful stripes are surely impressing. The journey through the rings of Saturn reveals the structure and mesmerises with the details.

Gas giants Uranus and Neptune along with their respective moons take you to a wonderland; the dwarf planets and dusty comet are explained with effective animations.

The Sun in all its brilliance shows up its interior, surface features like sunspots and solar flares. The Moon with its beautiful landscapes will make you dream of looking at earth from its horizon.

Stunning high resolution images of the Sun and other objects brings out unimaginable joy and unforgettable experience.

The show will provide an immersive experience taking you through a great voyage across the Solar System.